ಕರ್ನಾಟಕ ಸರ್ಕಾರ
ರಾಷ್ಟ್ರೀಯ ಸೇವಾ ಯೋಜನೆ
ಪದವಿ ಪೂರ್ವ ಶಿಕ್ಷಣ ಇಲಾಖೆ

ಸಂಖ್ಯೆ:ಪಪೂಶಿಇ/ರಾಸೇಯೋ/ವಿ.ಮ.ಕಾ/01/2016-17 ದಿನಾಂಕ: 09-08-2016

ಸುತ್ತೋಲೆ

ವಿಷಯ: ಎನ್.ಎಸ್.ಎಸ್. ಕಾರ್ಯಕ್ರಮಾಧಿಕಾರಿಗಳಿಗೆ ವಿಭಾಗ ಮಟ್ಟದಲ್ಲಿ ಒಂದು ದಿನ ಪುನಶ್ಚೇತನ ಕಾರ್ಯಗಾರ ನಡೆಸುವ ಬಗ್ಗೆ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಪದವಿ ಪೂವ ಶಿಕ್ಷಣ ಇಲಾಖೆಯ ರಾಷ್ಟ್ರೀಯ ಸೇವಾ ಯೋಜನೆಯ ಕಾಲೇಜು ಹಂತದ ಎನ್.ಎಸ್.ಎಸ. ಕಾರ್ಯಕ್ರಮಾಧಿಕಾರಿಗಳಿಗೆ ವಿಭಾಗಮಟ್ಟದಲ್ಲಿ 2016-17 ನೇ ಸಾಲಿಗೆ ಹಮ್ಮಿಕೊಳ್ಳಬಹುದಾದ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ನೀಡುವ ಸಲುವಾಗಿ ಒಂದು ದಿನದ ಕಾರ್ಯಗಾರ ಈ ಕೆಳಕಂಡ ಸ್ಥಳ ಮತ್ತು ದಿನಾಂಕಗಳಂದು ಹಮ್ಮಿಕೊಳ್ಳಲಾಗಿದೆ. ರಾಷ್ಟ್ರೀಯ ಸೇವಾ ಯೋಜನೆಯ ಘಟಕಗಳ ಕಾರ್ಯಕ್ರಮಾಧಿಕಾರಿಗಳಿಗೆ ಕಾರ್ಯಗಾರವನ್ನು ಏರ್ಪಡಿಸಲಾಗಿದೆ. (ಕಾರ್ಯಕ್ರಮಾಧಿಕಾರಿಗಳನ್ನು ಬದಲಾವಣೆ ಮಾಡಬೇಕಾದರೆ ಟಿ.ಓ.ಸಿ ತರಬೇತಿ ಪಡೆದ ಕಾರ್ಯಕ್ರಮಾಧಿಕಾರಿಗಳಿದ್ದರೆ ಅವರನ್ನೇ ನೇಮಿಸುವುದು ಕಡ್ಡಾಯವಾಗಿರುತ್ತದೆ.)

| ಕ್ರ.ಸಂ. | ಭಾಗವಹಿಸಬೇಕಾದ ಜಿಲ್ಲೆಗಳ ಕಾರ್ಯಕ್ರಮಾಧಿಕಾರಿಗಳು | ಕಾರ್ಯಗಾರ ನಡೆಯುವ ಸ್ಥಳ | ದಿನಾಂಕ ಮತ್ತು ಸಮಯ |
|---|---|---|---|
| 1. | ಬೆಂಗಳೂರು ವಿಭಾಗ<br>ಬೆಂಗಳೂರು ಉತ್ತರ<br>ಬೆಂಗಳೂರು ದಕ್ಷಿಣ<br>ಬೆಂಗಳೂರು ಗ್ರಾಮಾಂತರ<br>ಕೋಲಾರ, ಚಿಕ್ಕಬಳ್ಳಾಪುರ,<br>ರಾಮನಗರ, ತುಮಕೂರು,<br>ಚಿತ್ರದುರ್ಗ, ದಾವಣಗೆರೆ | ಮಹಾರಾಣಿ ಲಕ್ಷ್ಮಿ ಅಮ್ಮಣಿ ಪದವಿಪೂರ್ವ ಕಾಲೇಜು ಮಲ್ಲೇಶ್ವರಂ ಬೆಂಗಳೂರು – 560012 | 22-8-206<br>ಬೆ. 8.30 ರಿಂದ<br>ಸಂಜೆ 5.30 ರವರೆಗೆ |
| 2. | ಮೈಸೂರು, ಚಾಮರಾಜನಗರ, ಮಂಡ್ಯ, ಉಡುಪಿ, ದ.ಕನ್ನಡ, ಹಾಸನ, ಚಿಕ್ಕಮಗಳೂರು, ಕೊಡಗು, ಶಿವಮೊಗ್ಗ | ಮಹಾಜನ ಪದವಿಪೂರ್ವ ಕಾಲೇಜು, ಜಯ ಲಕ್ಷ್ಮಿಪುರ ವಿವೇಕನಂದಾ ಸಭಾಂಗಣ ಮೈಸೂರು 57012. | 25-8-2016<br>ಬೆ. 8.30 ರಿಂದ<br>ಸಂಜೆ 5.30 ರವರೆಗೆ |
| 3. | ಧಾರವಾಡ, ಬಾಗಲಕೋಟೆ, ಬೆಳಗಾಂ, ಬಿಜಾಪುರ, ಗದಗ್, ಹಾವೇರಿ, ಉತ್ತರ ಕನ್ನಡ, | ಆರ್.ಎಲ್ ಎಸ್ ಸಂಯುಕ್ತ ಪದವಿ ಪೂರ್ವ ಕಾಲೇಜು ಧಾರವಾಡ – 580008. | 31-8-2016<br>ಬೆ. 8.30 ರಿಂದ<br>ಸಂಜೆ 5.30 ರವರೆಗೆ |
| 4. | ಬೀದರ್, ಗುಲ್ಬರ್ಗಾ, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ | ದುದ್ದುಪುಡಿ ಸಂಯುಕ್ತ ಪದವಿ ಪೂರ್ವ ಕಾಲೇಜು ಸಿಂಧೂನೂರು ರಾಯಚೂರು | 01-9-2016<br>ಬೆ. 8.30 ರಿಂದ<br>ಸಂಜೆ 5.30 ರವರೆಗೆ |

ಮೇಲ್ಕಂಡ ದಿನಾಂಕ ಮತ್ತು ಸ್ಥಳಗಳಲ್ಲಿ ಸಂಬಂಧಿಸಿದ ಜಿಲ್ಲೆಯ ಪ್ರಾಂಶುಪಾಲರುಗಳು ತಮ್ಮ ಕಾಲೇಜಿನ ಎನ್.ಎಸ್.ಎಸ್. ಕಾರ್ಯಕ್ರಮಾಧಿಕಾರಿಗಳನ್ನು ಕಾರ್ಯಗಾರಕ್ಕೆ ತಪ್ಪದೇ ಹಾಜರಾಗಲು ಸೂಚಿಸಿ ಬಿಡುಗಡೆ ಮಾಡಲು ತಿಳಿಸಿದೆ.

ಈ ಮೇಲೆ ತಿಳಿಸಲಾಗಿರುವ 04 ಕಾರ್ಯಗಾರಗಳಲ್ಲಿ ತರಬೇತಿ ನೀಡಲು ಇಲಾಖೆ ಅಧಿಕಾರಿಗಳಾದ ಜಂಟಿ ನಿರ್ದೇಶಕರು (ಶೈಕ್ಷಣಿಕ/ಆಡಳಿತ) ಹಾಗೂ ಉಪ ನಿರ್ದೇಶಕರು (ಆಡಳಿತ) ಎನ್.ಎಸ್.ಎಸ್. ಸಂಯೋಜನಾಧಿಕಾರಿಗಳಾದ ಶ್ರೀಮತಿ ಪಿ.ಆರ್. ಗಾಯತ್ರಿರೆಡ್ಡಿ, ಸಂಯೋಜನಾಧಿಕಾರಿಗಳು, ಕೆಂಪೇಗೌಡ ಲೆಕ್ಕ ಪರಿಶೋಧನಾಧಿಕಾರಿಗಳು, ಶ್ರೀ ಕೆ.ಎಸ್. ಶಿವಮಾದಯ್ಯ, ಸಹಾಯಕ ಸಂಯೋಜನಾಧಿಕಾರಿಗಳು, ಬೆಂಗಳೂರು

ವಿಭಾಗ, ಶ್ರೀ ಲಯನ್ ಸಿ.ಆರ್. ದಿನೇಶ್, ಸಹಾಯಕ ಸಂಯೋಜನಾಧಿಕಾರಿಗಳು, ಮೈಸೂರು ವಿಭಾಗ, ಶ್ರೀ ಪಿ.ಎಸ್. ಗಿರಿರಾಜ್, ಸಹಾಯಕ ಸಂಯೋಜನಾಧಿಕಾರಿಗಳು, ಬೆಳಗಾಂ ವಿಭಾಗ, ಶ್ರೀ ಎಸ್. ಶಿವರಾಜ್, ಸಹಾಯಕ ಸಂಯೋಜನಾಧಿಕಾರಿಗಳು, ಗುಲ್ಬರ್ಗಾ ವಿಭಾಗ, ಹಾಗೂ ಸಿಬ್ಬಂದಿ ವರ್ಗದವರಾದ ಶ್ರೀಮತಿ ಗೀತಾ ಎಂ.ಎನ್. ದ್ವಿ.ದ.ಸ, ಶ್ರೀ ರಾಧಾಕೃಷ್ಣ, ಸಹಾಯಕರು, ಶ್ರೀ ಸನತ್ ಕುಮಾರ್ .ಬಿ.ಎನ್, ಡಿ.ಟಿ.ಪಿ ಆಪರೇಟರ್, ಇವರುಗಳನ್ನು ನಿಯೋಜಿಸಲಾಗಿದೆ.

ಪ್ರಯಾಣ ಭತ್ಯೆ: ಕಾರ್ಯಕ್ರಮಾಧಿಕಾರಿಗಳಿಗೆ ಪ್ರಯಾಣ ಭತ್ಯೆಯನ್ನು ಕೆ.ಸಿ.ಎಸ್.ಆರ್. ನಿಯಮ ರೀತ್ಯಾ ತಮ್ಮ ಕಾಲೇಜಿನ ಎನ್.ಎಸ್.ಎಸ್. ದೈನಂದಿನ ಚಟುವಟಿಕೆಗಳಿಗೆ ಬಿಡುಗಡೆಯಾಗುವ ಪ್ರಥಮ ಕಂತಿನ ಅನುದಾನದ ಜೊತೆಗೆ ಬಿಡುಗಡೆ ಮಾಡಲಾಗುವುದು. ಪ್ರಯಾಣ ಭತ್ಯೆ ಬಿಲ್ಲನ್ನು ಕಾರ್ಯಗಾರದ ಸಂದರ್ಭದಲ್ಲಿ ಕಡ್ಡಾಯವಾಗಿ ಸಲ್ಲಿಸಿದಲ್ಲಿ ಮಾತ್ರ ಪ್ರಯಾಣ ಭತ್ಯೆಯನ್ನು ನೀಡಲಾಗುವುದು. ಕಾರ್ಯಗಾರಕ್ಕೆ ಹಾಜರಾಗುವ ಕಾರ್ಯಕ್ರಮಾಧಿಕಾರಿಗಳ ಗೈರು ಹಾಜರಿಯನ್ನು ಅನ್ಯಕಾರ್ಯ ನಿಮಿತ್ತವೆಂದು ಪರಿಗಣಿಸಲು ಸೂಚಿಸಲಾಗಿದೆ.

(ನಿರ್ದೇಶಕರಿಂದ ಅನುಮೋದಿಸಲ್ಪಟ್ಟಿದೆ)

**ಜಂಟಿ ನಿರ್ದೇಶಕರು (ಶೈಕ್ಷಣಿಕ)**
**ಪದವಿ ಪೂರ್ವ ಶಿಕ್ಷಣ ಇಲಾಖೆ**

ಪ್ರತಿಗಳು:

1. ನಿರ್ದೇಶಕರ ಆಪ್ತ ಶಾಖೆ
2. ರಾಷ್ಟ್ರೀಯ ಸೇವಾ ಯೋಜನಾ ಘಟಕ ಹೊಂದಿರುವ ಎಲ್ಲಾ ಸರ್ಕಾರಿ/ಖಾಸಗಿ, ಪ.ಪೂ ಕಾಲೇಜುಗಳ ಪ್ರಾಂಶುಪಾಲರುಗಳ ಸೂಕ್ತ ಕ್ರಮಕ್ಕಾಗಿ.
3. ರಾಜ್ಯ ಸಂಪರ್ಕಾಧಿಕಾರಿಗಳು ಹಾಗೂ ರಾಜ್ಯ ಎನ್ ಎಸ್ ಎಸ್ ಅಧಿಕಾರಿಗಳು ರಾಷ್ಟ್ರೀಯ ಸೇವಾ ಯೋಜನೆ, ಯುವಜನ ಸೇವಾ ಇಲಾಖೆ, ಕರ್ನಾಟಕ ಸರ್ಕಾರ ಬೆಂಗಳೂರು.
4. ಸಹಾಯಕ ಕಾರ್ಯಕ್ರಮ ಸಲಹೆಗಾರರು, ಎನ್.ಎಸ್.ಎಸ್. ಪ್ರಾಂತೀಯ ಕೇಂದ್ರ, ಭಾರತ ಸರ್ಕಾರ, ಆರ್.ವಿ. ರಸ್ತೆ, ಬೆಂಗಳೂರು.
5. ಸಹಾಯಕ ನಿರ್ದೇಶಕರು ಇ-ಆಡಳಿತ, ಇವರಿಗೆ ಇಲಾಖೆಯ ಅಂತರ್ಜಾಲದಲ್ಲಿ ಪ್ರಕಟಿಸಲು.
6. ಲೆಕ್ಕಾಧಿಕಾರಿಗಳು, ಪ.ಪೂ.ಶಿ ಇಲಾಖೆ, ಕಛೇರಿ ಪತ್ರಿ.

**ವಿಶೇಷ ಸೂಚನೆ :-**

1. Format for submitting the data of NSS volunteers ಈ ಫಾರ್ಮೇಟನ್ನು ಈಗಾಗಲೇ ಇಲಾಖೆಯ ವೆಬ್‌ಸೈಟ್ www.pue.kar.nic.in/ NSS ನಲ್ಲಿ ಪ್ರಕಟಿಸಿದ್ದು, ಸದರಿಯ ಫಾರ್ಮೇಟನ್ನು ಭರ್ತಿ ಮಾಡಿ ಮೈಕ್ರೋಸಾಫ್ಟ್ ಎಕ್ಸೆಲ್‌ನಲ್ಲಿ ಕಳುಹಿಸಿಕೊಡುವುದು ಮೂಲ ಪ್ರತಿಯನ್ನು ಸ್ಕ್ಯಾನ್ ಮಾಡಿ ಕಳುಹಿಸಿದ್ದನ್ನು ಸ್ವೀಕರಿಸುವುದಿಲ್ಲ.
2. ವಿದ್ಯಾರ್ಥಿಗಳ ಅನುಮೋದನೆ ಮತ್ತು ವಿಶೇಷ ಶಿಬಿರದ ಪ್ರಸ್ತಾವನೆ ಪಟ್ಟಿಯನ್ನು ಸಲ್ಲಿಸಲು ಈ ಕೆಳಕಂಡ ವೆಬ್‌ಸೈಟ್ www.pue.kar.nic.in/ NSS ಲಿಂಕ್‌ನಿಂದ Enrolment Formats 2016-17 ರಲ್ಲಿ ಡೌನ್‌ಲೋಡ್ ಮಾಡಿಕೊಂಡು ದಿನಾಂಕ 30-08-2016. ರೊಳಗೆ ನಿರ್ದೇಶಕರ ಕಛೇರಿ, ಎನ್.ಎಸ್.ಎಸ್. ವಿಭಾಗ, ಪದವಿ ಪೂರ್ವ ಶಿಕ್ಷಣ ಇಲಾಖೆ 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 12 ಈ ವಿಳಾಸಕ್ಕೆ ಕಳುಹಿಸಿಕೊಡಲು ಸೂಚಿಸಿದೆ.
3. (ಟಿ.ಓ.ಸಿ) ಪ್ರಶಿಕ್ಷಣ ಸಂಸ್ಥೆಯಲ್ಲಿ ತರಬೇತಿ ಹೊಂದಿರುವ ಅಧಿಕಾರಿಗಳನ್ನು 4 ವರ್ಷ ಅವಧಿವರೆಗೂ ಎನ್.ಎಸ್.ಎಸ್. ಮಾರ್ಗ ಸೂಚಿಸಿದಂತೆ ಅಧಿಕಾರಿಗಳನ್ನು ಬದಲಾಯಿಸುವಂತಿಲ್ಲ.
4. ಎನ್.ಎಸ್.ಎಸ್. ದೈನಂದಿನ ಚಟುವಟಿಕೆ ಮತ್ತು ವಿಶೇಷ ಶಿಬಿರದ ಇತರೆ ಚಟುವಟಿಯಲ್ಲಿ ತೊಡಗಿರುವ ಕಾರ್ಯಕ್ರಮಗಳ ಫೋಟೋಗಳನ್ನು gayathrireddynss@gmail.com ಈ ಇಮೇಲ್ ವಿಳಾಸಕ್ಕೆ ಕಳುಹಿಸಲು ಸೂಚಿಸಿದೆ.

**ಜಂಟಿ ನಿರ್ದೇಶಕರು (ಶೈಕ್ಷಣಿಕ)**
**ಪದವಿ ಪೂರ್ವ ಶಿಕ್ಷಣ ಇಲಾಖೆ**